**CC 1313/2018**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**<u>ಸಿಸಿ ನಂಬರ್ 1313/2018</u>**

**ಸಿ ಡಬ್ಲ್ಯೂ -7**
**ಪಿ ಡಬ್ಲ್ಯೂ -8**

**ಸಾಕ್ಷಿಯ ಹೆಸರು -** **ಬಷೀರ್**
**ತಂದೆಯ ಹೆಸರು -** **ಮೊಹಮದ್ ಇಸಾಕ್**
**ವಯಸ್ಸು -** **47 ವರ್ಷಗಳು**
**ಉದ್ಯೋಗ -** **ಚಾಲಕ**
**ವಾಸಸ್ಥಳ -** **ಹೊಸಪೇಟೆ**

**<u>ಸಾಕ್ಷಿಯನ್ನು ದಿನಾಂಕಃ 07-03-2026 ರಂದು ಪ್ರಾಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ</u>**

ಚಾಸಾ -1 ನನ್ನ ತಂಗಿ. ಆರೋಪಿ ನನ್ನ ತಂಗಿಯ ಗಂಡ.

ನನ್ನ ತಂಗಿಗೂ ಆರೋಪಿಗೂ 2007 ರಲ್ಲಿ ಮದುವೆಯಾಗಿತ್ತು. ಸದರಿಯವರಿಗೆ ವೈವಾಹಿಕ ಜೀವನದಲ್ಲಿ ಆಗಾಗ್ಗೆ ಬಾಯಿಮಾತಿನಲ್ಲಿ ಜಗಳ ಆಗುತ್ತಿತ್ತು. ಆರೋಪಿ ನಮ್ಮಿಂದ ಯಾವುದೇ ವರದಕ್ಷಿಣೆ ಕೇಳಿರಲಿಲ್ಲ, ಪಡೆದಿಲ್ಲ ಮತ್ತು ಅದಕ್ಕೆ ಸಂಬಂಧಿಸಿ ಚಾಸಾ -1 ವರಿಗೆ ಕಿರುಕುಳ ನೀಡಿಲ್ಲ. ಆರೋಪಿ ಚಾಸಾ -1 ರವರಿಗೆ ಹೊಡೆ ಬಡೆ ಮಾಡಿಲ್ಲ, ಬೈದಿಲ್ಲ ಮತ್ತು ಜೀವಬೆದರಿಕೆ ಹಾಕಿಲ್ಲ, ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ಮದುವೆ ಸಮಯದಲ್ಲಿ ಆರೋಪಿ ರೂ 1,00,000/-, 10 ತೊಲೆ ಬಂಗಾರ, ರೂ. 3,00,000/- ಮದುವೆ ಖರ್ಚನ್ನು ನಮ್ಮಿಂದ ಪಡೆದಿರುತ್ತಾನೆ ಅಂದರೆ ಸರಿಯಲ್ಲ. ಆರೋಪಿ ಚಾಸಾ -1 ರವರೊಂದಿಗೆ ಒರಟಾಗಿ ನಡೆದುಕೊಂಡು ವರದಕ್ಷಿಣೆ ತರುವಂತೆ ಪದೇ ಪದೇ ಪೀಡಿಸುತ್ತಿದ್ದ ಅಂದರೆ ಸರಿಯಲ್ಲ. ನಾನು ನನ್ನ ತಂಗಿಗೆ ಕೊಟ್ಟಿದ್ದ 9 ತೊಲೆ ಬಂಗಾರವನ್ನು ಆರೋಪಿ ಮನಪುರಂ ಫೈನಾನ್ಸ್ ಕಂಪನಿಯಲ್ಲಿ ಇಟ್ಟು ಹಣ ಬಳಸಿಕೊಂಡಿರುತ್ತಾನೆ ಅಂದರೆ ಸರಿಯಲ್ಲ. ಆರೋಪಿ ತನ್ನ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡದೆ ಚಾಸಾ -1 ರವರಿಗೆ ಕಿರುಕುಳ ನೀಡುತ್ತಾ ಬಂದಿರುತ್ತಾರೆ ಅಂದರೆ ಸರಿಯಲ್ಲ. ನಂತರ ಹಿರಿಯರ ಸಮಕ್ಷಮ ಪಂಚಾಯಿತಿ ಮಾಡಿಸಿ ಚಾಸಾ -1 ರವರನ್ನು ಕಳುಹಿಸಿಕೊಟ್ಟಿದ್ದೆ ಅಂದರೆ ಸರಿಯಲ್ಲ. 2016 ರಲ್ಲಿ ಪುನಃ ಆರೋಪಿ ಕಿರುಕುಳ ನೀಡಿದ್ದರಿಂದ ಚಾಸಾ -1 ರವರು ನನ್ನ ಮನೆಗೆ ವಾಪಸ್ ಬಂದಿದ್ದರು ಅಂದರೆ ಸರಿಯಲ್ಲ. ದಿಃ 25-06-2017 ರಂದು ಆರೋಪಿ ನನ್ನ ಮನೆಗೆ ಬಂದು ಚಾಸಾ -1 ರವರಿಗೆ ಬೈದು ವರದಕ್ಷಿಣೆ ತರದಿದ್ದರೆ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾನೆ ಅಂದರೆ ಸರಿಯಲ್ಲ. ದಿಃ 14-08-2017 ರಂದು ಆರೋಪಿ ಪುನಃ ನನ್ನ ತಂಗಿಗೆ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿದ್ದ ಅಂದರೆ ಸರಿಯಲ್ಲ. ನಂತರ ಚಾಸಾ -1 ರವರು ದುರು ನೀಡಿರುತ್ತಾರೆ ಅಂದರೆ ಸರಿಯಲ್ಲ. ನಾನು ದಿಃ 14-09-2017 ರಂದು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿ ನೀಡಿಲ್ಲ ಎಂಬ ಹೇಳಿಕೆಯ ಭಾಗವನ್ನು ನಿಪಿಃ 24 ಎಂದು ಗುರುತಿಸಲಾಯಿತು.

ಆರೋಪಿಯೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್ ವಿ ಬಿ ವಕೀಲರಿಂದಃ** ಇಲ್ಲಾ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.